ಕುಡಿಯುವ ನೀರಿನ ಯೋಜನೆ ಅನುಷ್ಠಾನ

2613(2601); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ಲಿಂಗಸುಗೂರು ತಾಲ್ಲೂಕಿನಲ್ಲಿ ಗ್ರಾಮಗಳಿಗೆ ಕುಡಿಯುವ ನೀರಿನ ಪೂರೈಕೆ ಮಾಡಲು ಹಾಕಿಕೊಂಡ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಯಾವುವು (ಸಂಪೂರ್ಣ ವಿವರ ಒದಗಿಸುವುದು);

ಆ) ಸದರಿ ಯೋಜನೆ ಪ್ರಸ್ತುತ ಯಾವ ಹಂತದಲ್ಲಿದೆ (ವಿವರ ಒದಗಿಸುವುದು);

ಇ) ಈ ಯೋಜನೆಯನ್ನು ಯಾವಾಗ ಅನುಷ್ಠಾನ ಮಾಡಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಲಿಂಗಸುಗೂರು ತಾಲೂಕಿನ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆ ಮಾಡಲು ಹಾಕಿಕೊಂಡ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು ಈ ಕೆಳಗಿನಂತಿವೆ.

ಕ್ರ.ಸಂ.	ಯೋಜನೆಯ ಹೆಸರು
1	ಯರಡೋಣ ಮತ್ತು ಇತರೆ 6 ಗ್ರಾಮಗಳ ಸಂಯುಕ್ತ ನೀರು ಸರಬರಾಜು
2	ಮಸ್ಕಿ ಮತ್ತು ಇತರೆ 2 ಗ್ರಾಮಗಳ ಸಂಯುಕ್ತ ನೀರು ಸರಬರಾಜು
3	ಕಾಟಗಲ ಮತ್ತು ಇತರೆ 8 ಗ್ರಾಮಗಳ ಸಂಯುಕ್ತ ನೀರು ಸರಬರಾಜು
4	ಹುನಕುಂಟಿ ಮತ್ತು ಇತರೆ 2 ಗ್ರಾಮಗಳ ಸಂಯುಕ್ತ ನೀರು ಸರಬರಾಜು
5	ಯಲಗಟ್ಟ ಮತ್ತು ಇತರೆ 9 ಗ್ರಾಮಗಳ ಸಂಯುಕ್ತ ನೀರು ಸರಬರಾಜು

ಆ) 5 ಯೋಜನೆಗಳಲ್ಲಿ ಯರಡೋಣ ಹಾಗೂ ಮಸ್ಕಿ ಯೋಜನೆಗಳು ಪೂರ್ಣಗೊಂಡಿದ್ದು, ಕಾರ್ಯನಿರ್ವಹಿಸುತ್ತಿವೆ. ಕಾಟಗಲ್ ಮತ್ತು ಹುನಕುಂಟಿ ಯೋಜನೆಗಳು ತಾಂತ್ರಿಕ ಅನುಮೋದನೆಗೊಂಡಿದ್ದು, ಟೆಂಡರ ಪ್ರಕ್ರಿಯೆಯಲ್ಲಿವೆ. ಯಲಗಟ್ಟ ಯೋಜನೆಯ ಡಿ.ಎಸ್.ಆರ್. ತಯಾರಿಕೆ ಹಂತದಲ್ಲಿವೆ.

ಇ) ಟೆಂಡರ್ ಪ್ರಕ್ರಿಯೆಯಲ್ಲಿರುವ ಕಾಟಗಲ್ ಮತ್ತು ಹುನಕುಂಟಿ ಯೋಜನೆಗಳನ್ನು ಡಿಸೆಂಬರ–2015 ರೊಳಗೆ ಪೂರ್ಣಗೊಳ್ಳಲಿವೆ.

ರಾಯಚೂರು ಜಿಲ್ಲೆಯಲ್ಲಿರುವ ಡಿಸ್ಟಿಲರಿಗಳು

2614(2602); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ರಾಯಚೂರು ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಡಿಸ್ಟಿಲರಿಗಳ ಸಂಖ್ಯೆ ಎಷ್ಟು; ಇವುಗಳ ಕಾರ್ಯ ಕ್ಷಮತೆ ಎಷ್ಟು;

ಆ) ಕಳೆದ ಮೂರು ವರ್ಷಗಳಿಂದ ಈ ಡಿಸ್ಟಿಲರಿಗಳು ಅಬಕಾರಿ ಇಲಾಖೆಗೆ ಪಾವತಿಸಿರುವ ಶುಲ್ಕ ಎಷ್ಟು;

ಇ) ರಾಯಚೂರು ಜಿಲ್ಲೆಯ ಮದ್ಯ ಮಾರಾಟ ಈವರೆವಿಗೂ ನೀಡಲಾಗಿರುವ ಪರವಾನಗಿಗಳ ಸಂಖ್ಯೆ ಎಷ್ಟು; ಪರವಾನಗಿ ಪಡೆಯಲು ಇರುವ ಷರತ್ತುಗಳೇನು (ವಿವರ ನೀಡುವುದು)?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಅಬಕಾರಿ ಸಚಿವರು)

ಅ) 2013–14ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಮೆ:ಸಾವರಿನ್ ಡಿಸ್ಟಿಲರೀಸ್ ಲಿ., ಎಂಬ ಹೆಸರಿನ ಒಂದು ಡಿಸ್ಟಿಲರಿ ಕಾರ್ಯ ನಿರ್ವಹಿಸುತ್ತಿದ್ದು, ಇದರ ಉತ್ಪಾದನಾ ಕಾರ್ಯ ಸಾಮರ್ಥ್ಯ ಪ್ರತಿದಿನ 1,80,000 ಲೀ ಮದ್ಯಸಾರವಾಗಿರುತ್ತದೆ.